# ಶ್ರೀಮಾತೆಯವರ ಸಾನ್ನಿಧ್ಯದಲ್ಲಿ

ಬಂಗಾಳಿ ಮೂಲ : ಲಕ್ಷ್ಮೀಮಣಿ ದೇವಿ

ಅನುವಾದ : ಸ್ವಾಮಿ ಜ್ಞಾನಯೋಗಾನಂದ

**ನಾ**ವು ದಕ್ಷಿಣೇಶ್ವರದಲ್ಲಿದ್ದಾಗ ನಹಬತ್‌ನಲ್ಲಿ ಇರುತ್ತಿದ್ದೆವು. ಶ್ರೀರಾಮಕೃಷ್ಣರು ಮಲಗುವ, ಕುಳಿತುಕೊಳ್ಳುವ ಕೋಣೆಯಲ್ಲಿ ಜನರು ತುಂಬಿರುತ್ತಿದ್ದರೆ, ಅವರು ಸನ್ನೆ ಮಾಡುತ್ತ ಸೂಚಿಸುತ್ತಿದ್ದರು. ಶ್ರೀಮಾತೆಯವರ ಮೂಗಿನಲ್ಲಿ ವೃತ್ತಾಕಾರದ ಮೂಗುತಿ ಇರುತ್ತಿತ್ತು. ಅವರು ನಹಬತ್‌ಗೆ 'ಗೂಡು' ಎನ್ನುತ್ತಿದ್ದರು. ನಮ್ಮಿಬ್ಬರನ್ನೂ ಶುಕ-ಸಾರಿಕೆ ಎಂದು ಕರೆಯುತ್ತಿದ್ದರು. ಇತ್ತ ಶ್ರೀಮಾತೆಯವರ ಹೆಸರು ಕೂಡ 'ಸಾರದಾ' ('ಸಾರಿಕೆ' ಎಂಬುದಕ್ಕೆ ಹೊಂದಿಕೆಯಾಗುವಂತೆ *–ಅನು).* ಕಾಳೀಮಾತೆಯ ಪ್ರಸಾದ – ಅಂದರೆ ಹಣ್ಣುಹಂಪಲು, ಸಿಹಿತಿಂಡಿ ಇತ್ಯಾದಿಗಳು ಶ್ರೀರಾಮಕೃಷ್ಣರ ಕೋಣೆಗೆ ಬಂದರೆ, ಅವರು ರಾಮಲಾಲ ಅಣ್ಣನಿಗೆ ಹೇಳುತ್ತಿದ್ದರು (ತಮ್ಮ ಮೂಗಿನ ಬಳಿ ಅದೇ ಚಿಹ್ನೆ ಮಾಡಿ ತೋರಿಸುತ್ತ) : ''ನೋಡಯ್ಯ, ಗೂಡಿನಲ್ಲಿ ಶುಕ-ಸಾರಿಕೆ ಹಕ್ಕಿಗಳಿವೆ. ಹಣ್ಣುಹಂಪಲು, ಕಾಳು ಇತ್ಯಾದಿಗಳನ್ನು ಕೊಟ್ಟು ಬಾ.'' ನಿಜವಾಗಿಯೂ ಅಲ್ಲಿ ಹಕ್ಕಿಗಳಿವೆ ಎಂದು ಹೊರಗಿನ ಜನ ತಿಳಿದುಕೊಳ್ಳುತ್ತಿದ್ದರು. ಮಾಸ್ಟರ್ ಮಹಾಶಯ ಮೊದಮೊದಲು ಹಾಗೆಯೇ ತಿಳಿದುಕೊಂಡಿದ್ದರು.

ಹಲವು ಪ್ರದೇಶಗಳಿಂದ ಬಂದ ಹೆಣ್ಣುಮಕ್ಕಳು ಶ್ರೀಮಾತೆಯವರಿಗೆ ಏನೇನೋ ಹೇಳುತ್ತಿದ್ದರು. ಈ ಮಾತುಗಳೆಲ್ಲ ನಡುನಡುವೆ ಶ್ರೀರಾಮಕೃಷ್ಣರ ಕಿವಿಗೂ ಬೀಳುತ್ತಿತ್ತು. ಅವರು ಶ್ರೀಮಾತೆಯವರಿಗೆ ಹೇಳುತ್ತಿದ್ದರು: ''ನೋಡು, ಅವರೆಲ್ಲ ಬಂದು ಹಾಸ್‌ಪುಕುರಿನ ನಾಲ್ಕೂ ದಡಗಳಲ್ಲಿ ಓಡಾಡುತ್ತಾರೆ ಹಾಗೂ ನನ್ನನ್ನು ನೋಡಿ, ತಮ್ಮತಮ್ಮೊಳಗೇ ಏನೆಲ್ಲ ಮಾತನಾಡಿಕೊಳ್ಳುತ್ತಾರೆ! ನನಗೆ ಅದೆಲ್ಲ ಗೊತ್ತಾಗುತ್ತದೆ. ಅವರು ಹೀಗೆ ಹೇಳಿಕೊಳ್ಳುತ್ತಾರೆ, 'ಅವರಲ್ಲಿ ಎಲ್ಲ ಚೆನ್ನಾಗಿದೆ. ಆದರೂ ಅವರು ರಾತ್ರಿ ಹೊತ್ತು ತಮ್ಮ ಪತ್ನಿಯೊಂದಿಗೆ ಇರುವುದಿಲ್ಲ' ಅಂತ. ಅವರ ಮಾತುಕತೆ, ಚರ್ಚೆ ಇವನ್ನೆಲ್ಲ ನೀನು ಕೇಳಬಾರದಮ್ಮ. ಅವರು ಹೇಳುತ್ತಾರೆ, ನನ್ನ ಮನಸ್ಸನ್ನು ಹೊರಳಿಸಲು ಔಷಧಿ ಏನಾದರೂ ನೀಡಬೇಕು ಅಂತ. ನೋಡಮ್ಮ, ಅವರ ಮಾತನ್ನು ಕೇಳಿ ನನಗೆ ಔಷಧಿ ಇತ್ಯಾದಿ ಏನೂ ಕೊಡಬೇಡ. ನನ್ನಲ್ಲಿ ಏನೇನಿರಬೇಕೋ ಎಲ್ಲವೂ ಇದೆ. ಆದರೂ ಭಗವಂತನಿಗೋಸ್ಕರ ಎಲ್ಲ ಶಕ್ತಿಯನ್ನೂ ಸಂಚಯನ ಮಾಡಿಕೊಂಡಿದ್ದೇನೆ.'' ಶ್ರೀಮಾತೆಯವರು ಮೆಲುದನಿಯಿಂದ, ''ಇಲ್ಲ, ಇಲ್ಲ, ಇದೆಂಥ ಮಾತು!'' ಎನ್ನುತ್ತಿದ್ದರು.

ನಹಬತ್‌ನ ಅಷ್ಟು ಸಣ್ಣ ಕೋಣೆಯಲ್ಲಿ ಎಲ್ಲವನ್ನೂ ಹೇಗೆ ಇಟ್ಟುಕೊಳ್ಳುತ್ತಿದ್ದೆವು ಎಂಬುದು ಈಗ ಮನಸ್ಸಿಗೆ ಬರುತ್ತಿದೆ. ಶ್ರೀಮಾತೆ, ನಾನು, ಇನ್ನೊಂದು ಹುಡುಗಿ○ ಅಲ್ಲಿ ವಾಸವಾಗಿದ್ದೆವು. ಎಲ್ಲವೂ ಠಾಕೂರರ ಲೀಲೆ! ಅಲ್ಲದೆ, ಕಲ್ಕತ್ತೆಯಿಂದ ಆಗಾಗ ಕೆಲವು ಮಂದಿ ಭಕ್ತೆಯರು ಬಂದು ತಂಗುತ್ತಿದ್ದರು. ಕಾಮಾರಹಾಟಿಯ ಗೋಪಾಲನ ತಾಯಿ ನಡುನಡುವೆ ಬಂದು ಉಳಿದುಕೊಳ್ಳುತ್ತಿದ್ದರು. ಅವರದು ದೊಡ್ಡ, ದಪ್ಪನೆಯ ದೇಹಾಕೃತಿ. ಇದಾದರೋ ತುಂಬ ಚಿಕ್ಕದಾದ ಕೋಣೆ. ಅದರಲ್ಲೇ ಇದೆಲ್ಲವೂ ನಡೆಯಬೇಕು. ಒಂದು ದೊಡ್ಡ ಸಂಸಾರವೆ! ನಮ್ಮೆಲ್ಲ ಸಾಮಾನುಗಳನ್ನೂ ಅದರೊಳಗೆಯೇ ಇಡಬೇಕು. ಅಡುಗೆಗೆ ಬೇಕಾದ ಎಣ್ಣೆ, ಉಪ್ಪು, ಮೆಣಸಿನಕಾಯಿ, ಚಿಕ್ಕೆ, ಮಸಾಲೆ, ತುರಿಮಣೆ, ಪಾತ್ರೆಪರಡಿ, ಬುಟ್ಟಿ ಇತ್ಯಾದಿಗಳು, ಭರಣಿ ಇವೆಲ್ಲ ಇರುತ್ತಿದ್ದವು. ಕುಡಿಯುವ ನೀರಿನ ಹಂಡೆಯೂ ಇರುತ್ತಿತ್ತು. ಇದರ ನಡುವೆ, ಠಾಕೂರರಿಗೆ ಹೊಟ್ಟೆ ಕೆಡುತ್ತಿತ್ತು. ಅದಕ್ಕಾಗಿ ಹಲವು ಬಗೆಯ ಪಥ್ಯಮಾಡಲು ಅಗತ್ಯವಾದ ವಸ್ತುಗಳೂ ಇರುತ್ತಿದ್ದವು. ಕೊಯ್, ಸಿಂಗಿ, ಮಾಗುರ್, ಜಾವ್ಲಾ ಮುಂತಾದ ಮೀನುಗಳು – ಏನೇನು ಸಿಗುತ್ತಿತ್ತೋ ಅವೆಲ್ಲ ಇರುತ್ತಿದ್ದವು.

ನನ್ನ ಮದುವೆಯಾಗಿ, ನಾನು ವಿಧವೆಯಾದ ನಂತರ ತವರುಮನೆಗೆ ಮರಳಿ ಬಂದಾಗ, ಶ್ರೀರಾಮಕೃಷ್ಣರು ಒಂದು ದಿನ ನನಗೆ ಹೇಳಿದರು: ''ಧರ್ಮ-ಕರ್ಮ ಏನಿದ್ದರೂ ಅದನ್ನು ಮನೆಯೊಳಗೆ ಕುಳಿತೇ ಮಾಡು. ಹೊರಗೆ ತೀರ್ಥಯಾತ್ರೆ ಇತ್ಯಾದಿಗಳಿಗೆ ಒಬ್ಬಳೇ ತಿರುಗಬೇಡ. ಯಾರ ಬಲೆಗೆ ಬಿದ್ದು ಬಿಡುವೆಯೋ, ಯಾರಿಗೆ ಗೊತ್ತು? ಈ ಚಿಕ್ಕಮ್ಮನ (ಶ್ರೀಮಾತೆಯವರ) ಜೊತೆಗೇ ಇರು. ಹೊರಗಡೆ ತುಂಬಾ ಅಪಾಯ.'' ಆಗ ನಾನಿನ್ನೂ ಸುಂದರ ಯುವತಿ. ಹೆಣ್ಣುಮಕ್ಕಳು ನಾಚಿಕೆಯಿಲ್ಲದೆ, ಸ್ವೇಚ್ಛೆಯಿಂದ ಇರುವುದನ್ನು ಅವರು ಸ್ವಲ್ಪವೂ ಸಹಿಸುತ್ತಿರಲಿಲ್ಲ.


ಅವರು ವೃದ್ಧರಾಗಿ ಬದುಕಿರಲು ಸ್ವಲ್ಪವೂ ಇಷ್ಟಪಡುತ್ತಿರಲಿಲ್ಲ. ಹೇಳುತ್ತಿದ್ದರು, ''ಜನ ಹೇಳುತ್ತಾರೆ, ರಾಣಿ ರಾಸಮಣಿಯ ಕಾಳೀಮಂದಿರದಲ್ಲಿ ಒಬ್ಬ 'ಮುದುಕ' ಸಾಧು ವಾಸವಾಗಿದ್ದಾನೆ ಅಂತ – ಆ ಮಾತನ್ನೆಲ್ಲ ನನಗೆ ಸಹಿಸಲಾಗದು ನೋಡಮ್ಮ'' ಅಂತ. ಶ್ರೀಮಾತೆ ಹೇಳುತ್ತಿದ್ದರು – ''ಅಂಥ ಮಾತನ್ನು ಹೇಳಬಹುದೆ? ನಿಮಗಿನ್ನೂ ಈಗ ತೀರಿಕೊಳ್ಳುವ ಸಮಯ ಬಂದಿದೆಯೆ? ವೃದ್ಧರಾಗಿ ನೀವು ಇಲ್ಲಿ ಇದ್ದರೂ ಜನ ಹೇಳುತ್ತಾರೆ, ರಾಸಮಣಿಯ ಕಾಳೀಮಂದಿರದಲ್ಲಿ ಒಬ್ಬರು 'ಪ್ರವೀಣ' ಸಾಧುಗಳು ಇದ್ದಾರೆ ಅಂತ.''

○ ಈ ಹುಡುಗಿಯೇ ಮುಂದೆ 'ಬಸುಮತಿ ಮಾ' ಎಂಬ ಹೆಸರಿನಿಂದ ಪ್ರಸಿದ್ಧರಾದ ಭವತಾರಿಣೀದೇವಿ. ಅವರು 'ಬಸುಮತಿ ಸಾಹಿತ್ಯ ಮಂದಿರ'ದ ಸಂಸ್ಥಾಪಕರೂ, ಮಾಲೀಕರೂ ಆದ – ಶ್ರೀರಾಮಕೃಷ್ಣರ ಗೃಹೀಶಿಷ್ಯರಾದ ಉಪೇಂದ್ರನಾಥ ಮುಖ್ಯೋಪಾಧ್ಯಾಯರ ಪತ್ನಿ. *(–ಸಂ.)*

ಆಗ ಶ್ರೀರಾಮಕೃಷ್ಣರು ಹೇಳುತ್ತಿದ್ದರು: ‘‘ಹಾಂ, ಜನರು ‘ಪ್ರವೀಣ’, ಇನ್ನೊಂದು ಅಂತ ನೂರಾರು ಬಗೆಯಲ್ಲಿ ಹೇಳು ತ್ತಾರೆ! ಚಂಡೀದಾಸನ ಕಥೆ ಗೊತ್ತಲ್ಲ? ಚಂಡೀದಾಸ ದೀರ್ಘ ಕಾಲ ಬದುಕಿದ್ದ – ಮುದುಕನಾಗಿಬಿಟ್ಟಿದ್ದ. ಬಾಲ್ಯದಲ್ಲಿ ಅವನು ಶತದಡ್ಡನಾಗಿದ್ದ; ಓದುಬರಹ ಕಲಿಯಲಿಲ್ಲ. ಅವನ ತಂದೆ ಒಂದು ದಿನ ಬೇಜಾರುಪಟ್ಟುಕೊಂಡು, ಕೋಪದಿಂದ ಅವನ ತಾಯಿಗೆ ಹೇಳಿದ, ‘ಚಂಡೀದಾಸನಿಗೆ ಇನ್ನು ಅನ್ನ ಹಾಕಬೇಡ. ನಾಲ್ಕು ಹಿಡಿ ಬೂದಿ ಹಾಕು!’ ಒಂದು ದಿನ ಚಂಡೀದಾಸ ಊಟಕ್ಕೆ ಕುಳಿತಿದ್ದ, ಎಲೆಯ ಒಂದು ಬದಿಯಲ್ಲಿ ಎರಡು ಹಿಡಿ ಬೂದಿ. ಚಂಡೀದಾಸ ತಾಯಿಯನ್ನು ಕೇಳಿದ, ‘ಇದೇನಮ್ಮಾ?’ ಆಕೆ ಹೇಳಿದಳು, ‘ನಿನ್ನ ತಂದೆ ಬೂದಿ ಬಡಿಸುವುದಕ್ಕೆ ಹೇಳಿದ್ದಾರೆ. ನೀನು ಓದುಬರಹ ಏನೇನೂ ಮಾಡುವುದಿಲ್ಲ. ನಾನು ನಿನ್ನ ತಾಯಿಯಾಗಿ, ಅದನ್ನು ಹೇಗೆ ಬಡಿಸಲಿ?’ ಎನ್ನುತ್ತ ಆಕೆ ಜೋರಾಗಿ ಅಳತೊಡಗಿದಳು.

‘‘ಬಳಿಕ ಒಂದು ದಿನ ಕೋಪಗೊಂಡು ಮನೆಬಿಟ್ಟು ಹೊರಟ. ದುಃಖದಿಂದ ಅವನು ತಾಯಿ ಬಾಸುಲಿ[೨]ಯನ್ನು ಪ್ರಾರ್ಥಿಸ ತೊಡಗಿದ. ತಾಯಿ ಪ್ರತ್ಯಕ್ಷಳಾದಳು. ‘ನಿನ್ನ ಮೂರ್ಖತನವನ್ನು ಹೋಗಲಾಡಿಸುತ್ತೇನೆ. ನಿನ್ನ ಮಧುರವಾದ ಹಾಡನ್ನು ಕೇಳಿ ಎಲ್ಲರೂ ಆಶ್ಚರ್ಯಪಡುತ್ತಾರೆ’ ಎಂದಳು. ಕ್ರಮೇಣ ಚಂಡೀ ದಾಸನಿಗೆ ತನ್ನ ಅಂತರಂಗದಿಂದ ಸಂಗೀತ ಒಲಿದುಬಂತು. ಅವ ನದು ದೇವದುರ್ಲಭ ಕಂಠ. ಹೆಣ್ಣುಮಕ್ಕಳು ಸ್ನಾನ ಮಾಡಲು ಕೊಳದತ್ತ ಹೋಗುತ್ತಿದ್ದರೆ, ಚಂಡೀದಾಸನು ತನ್ನ ಮನಸ್ಸಿನ ಆಳ ಕ್ಕಿಳಿದು ಹಾಡುತ್ತಿದ್ದ. ಅವನ ಹಾಡು ಅತ್ಯಂತ ಮಧುರ. ಚಂಡೀ ದಾಸನ ಚಾರಿತ್ರ್ಯ ಕೆಟ್ಟುಹೋಗಿದೆ ಎಂದು ಜನ ಹೇಳುತ್ತಿದ್ದರು. ಕಾಲಕ್ರಮೇಣ ಆ ದೇಶದ ರಾಜ, ಜಮೀನ್ದಾರ ಮುಂತಾದವ ರೆಲ್ಲ ಚಂಡೀದಾಸನ ಹಾಡುಗಳನ್ನು ಕೇಳಿ ಮುಗ್ಧರಾದರು. ಅತ್ಯಂತ ಗೌರವಾದರಗಳಿಂದ ಅವನನ್ನು ಅರಮನೆಗೆ ಕರೆದು ಕೊಂಡು ಹೋದರು. ಅಲ್ಲಿಂದ ನಂತರ ಚಂಡೀದಾಸನಿಗೆ ಯಾವುದೇ ಕಷ್ಟ, ಸಂಕಟಗಳಿರಲಿಲ್ಲ. ಊಟ ಇತ್ಯಾದಿಗಳ ಚಿಂತೆ ಯೇನೂ ಇರಲಿಲ್ಲ. ಅವನಿಗೆ ಅಪಾರ ಕೀರ್ತಿ, ಹೆಸರು ದೊರ ಕಿತು. ಅವನ ಮೇಲಿದ್ದ ಅಪವಾದಗಳೆಲ್ಲ ದೂರವಾದವು. ದೀರ್ಘ ಕಾಲ ಅವನು ಬಾಳಿ ಬದುಕಿದ. ಅವನು ಮುದುಕನಾದಾಗ, ಊರಿನ ತರುಣಿಯರೆಲ್ಲ ಅವನ ಬಳಿಗೆ ಹೋಗುತ್ತಿದ್ದರು. ಈ ದೃಷ್ಟಿಯಿಂದ ಅವನದು ಮಧುರಭಾವ. ಹೆಣ್ಣುಮಕ್ಕಳೆಲ್ಲ ಅವನ ಬಳಿಗೆ ಹೋಗಿ, ಸಹಜವಾಗಿ ‘ತಂದೆ’ಯೆಂದೇ ಕರೆಯುತ್ತಿದ್ದರು. ಆದರಿಂದ ವೃದ್ಧ ಚಂಡೀದಾಸನಿಗೆ ತುಂಬ ದುಃಖವುಂಟಾಗು ತ್ತಿತ್ತು. ಅವನ ಮನಸ್ಸಿಗೆ ಅದು ಹಿಡಿಸುತ್ತಿರಲಿಲ್ಲ. ಬಹಳ ದುಃಖ ದಿಂದ ಅವನು ಹೇಳುತ್ತಿದ್ದ–

ಬಾಸೂಲಿ ಆದೇಶದಿ ಚಂಡೀದಾಸ ಹೇಳುವನು
ಇದು ಬಹಳ ಕಷ್ಟವಪ್ಪಾ


ಶ್ರೀಮಾತೆಯವರೊಂದಿಗೆ ಲಕ್ಷ್ಮೀದೇವಿ (ಬಲಗಡೆ)

ತರುಣಿಯರು ಬಂದು ತಲೆಯ ಬಳಿ ಕುಳಿತು
ಕರೆಯುವರು ನನ್ನನ್ನು ‘ಅಪ್ಪಾ!’

– ಆದ್ದರಿಂದ ನನಗೂ ‘ಮುದುಕ’ ಎಂಬ ಹೆಸರನ್ನು ಸಹಿಸ ಲಾಗದು ಕಣಪ್ಪಾ.’’

ಈ ಕಥೆಯನ್ನು ಕೇಳಿ ಎಲ್ಲರೂ ನಗತೊಡಗಿದರು.

ದಕ್ಷಿಣೇಶ್ವರದಲ್ಲಿ ಶ್ರೀರಾಮಕೃಷ್ಣರು ಅಜ್ಜಿಗೆ (ಶ್ರೀರಾಮ ಕೃಷ್ಣರ ತಾಯಿ – ಚಂದ್ರಮಣಿ ದೇವಿ) ಹೇಳುತ್ತಿದ್ದರು: ‘‘ಅಮ್ಮಾ, ನೀನು ಊರಲ್ಲಿ ಮಾಡುವ ಹಾಗೆ ಚೆನ್ನಾಗಿ ಮಸಾಲೆ ಇತ್ಯಾದಿ ಹಾಕಿ ಒಂದೆರಡು ಪಲ್ಯ ಮಾಡಿಬಿಡು. ತಿನ್ನಬೇಕೆಂದು ತುಂಬ ಮನಸ್ಸಾಗುತ್ತಿದೆ.’’ ಅಜ್ಜಿ ಅದೇ ರೀತಿ ಅಡುಗೆ ಮಾಡು ತ್ತಿದ್ದರು. ಅದನ್ನು ಊಟ ಮಾಡಿ ಠಾಕೂರರಿಗೆ ತುಂಬಾ ಆನಂದ. ಅಜ್ಜಿ ತೀರಿಕೊಂಡ ನಂತರ, ಶ್ರೀರಾಮಕೃಷ್ಣರ ಊಟವನ್ನು ಪ್ರತಿ ದಿನವೂ ಶ್ರೀಮಾತೆಯವರು ಅವರ ಕೋಣೆಗೆ ತೆಗೆದುಕೊಂಡು ಹೋಗಿ, ಕೊಟ್ಟು ಬರುತ್ತಿದ್ದರು. ಶ್ರೀರಾಮಕೃಷ್ಣರು ನಡುನಡುವೆ ಗುಟ್ಟಾಗಿ ಹೇಳುತ್ತಿದ್ದರು, ‘‘ಭಾಗ್ಯವೆಂಬ ಮರದ ನೆರಳು ನನ್ನ ಮೇಲಿತ್ತು. ಇಲ್ಲದಿದ್ದರೆ, ಯಾರು ಈ ರೀತಿ ಊಟ ಕೊಡುತ್ತಿದ್ದರು? ಅಡುಗೆ ಮಾಡಿ ನೀಡುತ್ತಿದ್ದರು? ಇಲ್ಲದಿದ್ದರೆ, ಉಡುವುದಕ್ಕೆ ಬಟ್ಟೆ ಬರೆ ಸಿಗುತ್ತಿರಲಿಲ್ಲ, ಅದರೊಂದಿಗೆ ಈ ವಿವಾಹ ಬೇರೆ!’’

ಠಾಕೂರರು ಹೇಳುತ್ತಿದ್ದರು, ‘‘ಹೆಣ್ಣುಮಕ್ಕಳು ಏನು ಮಾಡು ತ್ತಿರಬೇಕು? ಅಡುಗೆ, ಊಟ ಇತ್ಯಾದಿ ಒಳ್ಳೆಯದು. ಹಾಗಿದ್ದರೆ ಮನಸ್ಸು ಚೆನ್ನಾಗಿರುತ್ತದೆ. ಸೀತೆ ಅಡುಗೆ ಮಾಡುತ್ತಿದ್ದಳು. ಸ್ವಯಂ ಲಕ್ಷ್ಮೀದೇವಿ ಕೂಡ ಅಡುಗೆ ಮಾಡಿ ಎಲ್ಲರಿಗೂ ಬಡಿಸು ತ್ತಿದ್ದಳು. ದ್ರೌಪದಿ ಅಡುಗೆ ಮಾಡುತ್ತಿದ್ದಳು. ಪಾರ್ವತಿಯೂ ಅಡುಗೆ ಮಾಡುತ್ತಿದ್ದಳು.’’[೩]

*

೨ ಚಂಡೀ (ಅಥವಾ ದುರ್ಗೆ)ದೇವಿಯ ಒಂದು ರೂಪ. *(–ಅನು.)*

೩ **‘ರಾಮಕೃಷ್ಣ– ಶಾರದಾಮೃತ’** – ಬಂಗಾಳಿ ಗ್ರಂಥ, ಸ್ವಾಮಿ ನಿರ್ಲೇಪಾನಂದ, ಕರುಣಾ ಪ್ರಕಾಶನ, ಕಲ್ಕತ್ತಾ, ೧೯೬೮, ಪು. ೩–೧೦. ‘ಮಾಯೇರ್ ಪದಪ್ರಾಂತೇ’ ಗ್ರಂಥದ ಮೂರನೇ ಭಾಗದಲ್ಲಿ ಲಕ್ಷ್ಮೀಮಣಿ ದೇವಿಯ ಸ್ಮೃತಿಲೇಖನವು ಆರಂಭದಲ್ಲೇ ಬರುತ್ತದೆ. ಅದರಲ್ಲಿ ಬಂದಿಲ್ಲದ ಅಂಶ ಗಳನ್ನು ಮಾತ್ರವೇ ಈ ಸಂಕಲನದಲ್ಲಿ ನೀಡಲಾಗಿದೆ. *(–ಸಂ.)*